# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 137 (1141) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ |
| ಉತ್ತರಿಸುವ ದಿನಾಂಕ | : | 15-12-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಮೀನುಗಾರರನ್ನು ಎಸ್.ಸಿ ಸಮುದಾಯಕ್ಕೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಇದೆಯೆ; | ರಾಜ್ಯದಲ್ಲಿರುವ ಮೀನುಗಾರರನ್ನು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿಸುವ ಪ್ರಸ್ತಾವನೆ ಇರುವುದಿಲ್ಲ.<br><br>ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಪರ್ಯಾಯ ಪದಗಳಾದ ಬೆಸ್ತ/ಬೆಸ್ತರ್, ಭೋಯಿ/ರಾಜಭೋಯಿ, ಗಂಗೆಮಕ್ಕಳು, ಗಂಗೆಕುಲ, ಗಂಗಾಪುತ್ರ, ಗೌರಿಮತ, ಕಬ್ಬೇರರು, ಕಬ್ಬಲಿಗರು, ಕಬ್ಬಲಿ, ತಳವಾರರು, ಕೋಲಿ, ಕೋಲಿಮಹಾದೇವ, ಮೊಗವೀರ, ಮುಖವನ್, ಕೊಂಕಣಖಾರ್ವಿಗಳು, ಹರಿಕಾಂತರು, ಗಾಭಿತ್, ಪಾಗಿ, ಬುಂಡೆಬೆಸ್ತರು, ಅಂಬಿಗ ಪದಗಳನ್ನು ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ರಾಜ್ಯದ ಸರ್ಕಾರದ ಶಿಫಾರಸ್ಸಿನೊಂದಿಗೆ ಭಾರತ ಸರ್ಕಾರಕ್ಕೆ ದಿನಾಂಕ:03-03-2014 ರಂದು ಕಳುಹಿಸಲಾಗಿದೆ.<br><br>ಸದರಿ ಪ್ರಸ್ತಾವನೆ ಬಗ್ಗೆ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಕೇಳಲಾಗಿದ್ದ ಅಂಶಗಳ ಬಗ್ಗೆ ಸಮರ್ಥನೆ/ಅಭಿಪ್ರಾಯಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಪಡೆದು ದಿನಾಂಕ: 02-02-2021 ರಂದು ಹೆಚ್ಚುವರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಪ್ರಸ್ತುತ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿ ಬಾಕಿ ಇರುತ್ತದೆ. |
| ಆ) | ಹಾಗಿದ್ದಲ್ಲಿ ಯಾವಾಗ ಮೀನುಗಾರರನ್ನು ಎಸ್.ಸಿ ಸಮುದಾಯಕ್ಕೆ ಸೇರಿಸಿ ಈ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | |

**ಸಕಇ 490 ಎಸ್ಎಲ್ ಪಿ 2023**

**(ಡಾ ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು